ಕಾಡಿಗೆ ಕಣ್ಣು

ಕಲೀಮ್ ಉಲ್ಲಾ



# ಕಾಡುವ ಕಣ್ಣಿನ; ಕಾಡಿಗೆ ವರ್ಣದ ಕರ್ಣ

ಆದೃಷ್ಟಕ್ಕೆ ಮರದ ಮೇಲೆ ಮಲಗಿದ್ದ ಪ್ರಾಣಿ ಬ್ಲಾಕ್ ಲೆಪರ್ಡ್ ಎಂದು ಗೊತ್ತಾಯಿತು. ಅಲ್ಲೀತನಕ ಅರಣ್ಯ ಇಲಾಖೆಯವರು ಬ್ಲಾಕಿ ಇರಬಹುದು ಎಂದು ಹೇಳುತ್ತಿದ್ದರೇ ಹೊರತು ಖಚಿತಗೊಳಿಸಿರಲಿಲ್ಲ, ಭದ್ರಾ ಕಾಡಿನ ಮೂಲ ಕಪ್ಪು ಗಂಡು ಚಿರತೆಯನ್ನು ಪತ್ತೆ ಮಾಡಿ ಸ್ನೇಹಿತ ಡಾಕ್ಟ್ರು ನಮ್ಮ ಹುಡುಕುವ ಪ್ರಯತ್ನವನ್ನು ತೀವ್ರಗೊಳಿಸಿಬಿಟ್ಟರು. ಆದರೆ ಎಷ್ಟೇ ಹುಡುಕಿದರೂ ನಮ್ಮ ಹಣೇಬರೆಹಕ್ಕೆ ಅದು ಮತ್ತೆಂದೂ ಸಿಗಲೇ ಇಲ್ಲ.

'ಅಲ್ನೋಡಿ ಕಾಣ್ತಾ ಇದೆ' ಎಂದು ಕತ್ತಲ ಕೊರಕಲನ್ನು ತೋರಿಸಿದ. ನನಗಲ್ಲಿ ಕತ್ತಲೆ ವಿನಃ ಮತ್ತೇನೂ ಕಾಣಲಿಲ್ಲ. 'ಆ ಒಣ ಬಿದಿರು ಬಿದ್ದಿದೆಯಲ್ಲ. ಅದನ್ನೇ ನೇರ ಗುರಿ ಮಾಡಿಕೊಂಡು ಹಿಂದೆ ನೋಡಿ' ಎಂದ. 'ನಂಗೇನೂ ಕಾಣ್ತಿಲ್ಲ ರಮೇಶ' ಎಂದೆ. ಛೇ! ನನ್ನ ನಸೀಬೆ ಹೀಗೆ. ಬೇರೆಯವರಿಗೆ ಕಂಡದ್ದು ನನಗಂತೂ ತಕ್ಷಣಕ್ಕೆ ಕಾಣುವುದೇ ಇಲ್ಲ. ಈ ಕುರುಡುತನಕ್ಕೆ ನನ್ನ ಗಾಬರಿ ಸ್ವಭಾವ ಕಾರಣವಿದ್ದೀತು. ಕಾಡಿನಲ್ಲಿ ಕಾಣುವ ಕೆಲಸವೇ ಪರಿಶ್ರಮದ್ದು. ಕಂಡರೂ ಕಾಣದಂತೆ, ಕಾಣದಿದ್ದರೂ ಕಂಡಂತಾಗುವ ಒಂದು ವಿಚಿತ್ರ ಭ್ರಮೆ ಇಲ್ಲಿ ಹುಟ್ಟುತ್ತದೆ. ಏನೋ ಇದೆ ಎಂದು ನಂಬಿ ಕಣ್ಣು, ಮನಸ್ಸು ಹಿಗ್ಗಿಸಿಕೊಂಡು ಹುಡುಕಿದರೆ ಏನಾದರೂ ಸಿಕ್ಕೇ ಸಿಗುತ್ತದೆ. ಇದೇ ಕಾನನದ ಅಸಲಿ ಚಮತ್ಕಾರ. ಹೀಗಾಗಿ ರಮೇಶ ತೋರಿದ ಜಾಗವನ್ನೇ ಗುರಾಯಿಸುತ್ತಾ ಕೂತೆ.

ಅಲ್ಲಿ ಡ್ಯಾಮಿನ ನೀರಲೆಗಳು ಬೆಟ್ಟದ ಬುಡಕ್ಕೆ ಏಟು ಕೊಟ್ಟು ಮಣ್ಣನ್ನು ಕೊರೆದು ಬಿಸಾಕಿದ್ದ ಕಡೆ ಅಡ್ಡಡ್ಡ ಸುರಂಗಗಳು ಕಾಣುತ್ತಿದ್ದವು. ಆ ಜಾಗದಲ್ಲಿ ತೇಗದ ಮರವೊಂದಿದ್ದು ಅದು ತನ್ನೆಲ್ಲಾ ಬೇರುಗಳನ್ನು ಕಳಚಿಕೊಂಡು ಬೀಳುವಂತೆ ನಿಂತಿತ್ತು. ಅತ್ತ ಕಡೆ ಬೆರಳು ಮಾಡಿ 'ಬೊಡ್ಡೆ ಸಂದೀಲಿ ಅಡಗಿ ಕುಂತಿದೆ ನೋಡಿ ಸರ್. ನಮ್ಮ ಕಡೆಗೇ ಪಿಳಿಪಿಳಿ ನೋಡ್ತಿದೆ. ಬಿಳಿ ಮೀಸೆ ಕಾಣಲ್ವಾ!' ಎಂದು ರಮೇಶ ಮಂತ್ರವಾದಿಯಂತೆ ನುಡಿದ. ಇವನ ಮಾತನ್ನು ಯಾರೂ ತಕ್ಷಣಕ್ಕೆ ನಂಬದೆ ಗುಮಾನಿಯಿಂದ ಪರಸ್ಪರ ಮುಖ ನೋಡಿಕೊಂಡೆವು. ಆದರೆ ರಮೇಶನ ಮಾತಲ್ಲಿ ಖಚಿತತೆ ಇತ್ತು. ಹೀಗಾಗಿ ಅಲ್ಲಾಡುವ ಬೋಟಿನಲ್ಲಿ ನಿಂತು ಆತ ಸೂಚಿಸಿದ ಜಾಗದ ಕಡೆಗೆ ಕ್ಯಾಮೆರಾ ಕೀಲಿಸಿದೆ. ಬೆಳಕು ಹಿಗ್ಗಿಸುವ ಐಎಸ್‌ಓ ಬಟನ್ ಒತ್ತಿ ಹಿಡಿದು ಒಂದು ಚಿತ್ರ ತೆಗೆದು ಹಿಗ್ಗಿಸಿ ನೋಡಿದೆ. ಅಬ್ಬಬ್ಬ! ಹೌದೌದು! ಅದು ಕೂತು ನಮ್ಮನ್ನೇ ನೋಡುತ್ತಿದೆ. ಉದ್ದದ ಬಿಳಿ ಮೀಸೆಗಳೂ ಕಾಣುತ್ತಿವೆ. ಓಹೋ! ಅಂತೂ ಹುಡುಕಿಕೊಂಡು ಬಂದದ್ದು ವ್ಯರ್ಥವಾಗಲಿಲ್ಲ.

ಕಪ್ಪು ದೇಹದ ಈ ಪ್ರಾಣಿಯನ್ನು ಬೆಳಕಲ್ಲೇ ಕಂಡು ಹಿಡಿಯುವುದು ಕಷ್ಟ. ಅಂತಹುದರಲ್ಲಿ ಕತ್ತಲ ಕೂಪದಲ್ಲಿ ಹೊಕ್ಕು ಕೂತ ಇದನ್ನು ಗುರುತು ಹಚ್ಚುವುದಂತೂ ಅಸಾಧ್ಯದ ಕೆಲಸ. ಇದರ ಬಿಳಿ ಮೀಸೆಗಳು, ಹೊಳೆಯುವ ಹಳದಿ ಕಣ್ಣುಗಳು ಬಿಟ್ಟರೆ ಇಡೀ ದೇಹವೇ ಕಪ್ಪು. ಬಾಯಿ ಕಳೆದರೆ ಉಗ್ರ ಬಿಳಿ ಹಲ್ಲುಗಳು, ನಾಲಗೆ ಚಾಚಿದರೆ ಕಡು ಗುಲಾಬಿ ಬಣ್ಣ ಬಿಟ್ಟರೆ ಇದರ ಇರುವಿಕೆಯನ್ನು ಯಾರೂ ಗುರುತಿಸಲಾರರು. ಹೊರಗೆ ಬಿಸಿಲಿದ್ದರೂ